ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ರಚನೆ ಮಾಡಿದ್ದರು ಸಮಿತಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸೀಲ್ಡ್ ಕವರ್ ನಲ್ಲಿಟ್ಟು ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ ಸರ್ಕಾರ ಇದನ್ನು ಗಂಭೀರವಾಗಿ ಅವಲೋಕಿಸುತ್ತಿದೆ ಪ್ರಾಯಶಃ ಸೋಮವಾರ ಅಥವಾ ಮಂಗಳವಾರದೊಳಗೆ ಈ ಬಗ್ಗೆ ಸರ್ಕಾರ ನಿರ್ಣಯ ಕೈಗೊಳ್ಳುತ್ತದೆ

(4) **ವಿಷಯ** – ನಕ್ಸಲ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ವೆಂಕಟೇಶ್ ರವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) – ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಕ್ಷೇತ್ರದಲ್ಲಿ ನಕ್ಸಲೀಯರ ಉಪಟಳ ವಿಚಿತ್ರವಾದಂಥ ರೀತಿಯಲ್ಲಿ ಆಗುತ್ತಿದೆ ಎರಡು–ಮೂರು ಸಾರಿ ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ 17 ನೇ ತಾರೀಖಿನ ದಿವಸ ಆಗುಂಬೆ ಪತ್ತಿರ ನಡೆದಿರತಕ್ಕಂಥ ಒಂದು ಚಕಮಕಿಯಲ್ಲಿ ನನ್ನ ಕ್ಷೇತ್ರದ ಪೊಲೀಸ್ ಅಧಿಕಾರಿಯಾರಿರುವಂಥ ASI ವೆಂಕಟೇಶ್‌ರವರು ಆಹುತಿಯಾಗಿದ್ದಾರೆ ಅವರು ಸ್ಥಳೀಯರಾಗಿದ್ದರು ಮತ್ತು ಪೊಲೀಸ್‌ನವರಿಗೆ ಸಹಾಯ ಮಾಡತಕ್ಕಂಥ ವ್ಯಕ್ತಿಯಾಗಿದ್ದರು ಏಕೆಂದರೆ, ಆ ಗುಡ್ಡಗಾಡಿನಲ್ಲಿ ಎಲ್ಲಾ ರಸ್ತೆಗಳು ಗೊತ್ತಿರುವಂಥ ವ್ಯಕ್ತಿಯಾಗಿದ್ದರು ಅವರು ಮಾಲೂರಿನಲ್ಲಿ ಕೆಲಸ ಮಾಡುತ್ತಿದ್ದರೂ ಸಹ, ನಕ್ಸಲೈಟ್‌ಗೋಸ್ಕರ ಆಗುಂಬೆಯಲ್ಲಿ ಅವರ ಕೆಲಸವನ್ನು ಬಳಸಿಕೊಳ್ಳಲಾಗುತ್ತಿತ್ತು ಇಂಥ ಸಂದರ್ಭದಲ್ಲಿ ಅವರು ಮೃತಪಟ್ಟಿದ್ದಾರೆ ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅಲ್ಲಿಗೆ ಅಧಿಕಾರಿಗಳನ್ನು ಹಾಕಿದರೂ ಕೂಡ ಅಲ್ಲಿಗೆ ಹೋಗಲಾರದಂಥ ಸ್ಥಿತಿಯಲ್ಲಿ, ತಮ್ಮ ಎದೆಕೊಟ್ಟು ಹೋಗುವಂಥ ಪೊಲೀಸ್ ಅಧಿಕಾರಿಗಳಿಗೆ ಮತ್ತೆ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಧೈರ್ಯ ತುಂಬತಕ್ಕಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕಾಗಿದೆ ಮೃತಪಟ್ಟಿರುವ ವೆಂಕಟೇಶ್ ಕುಟುಂಬ ವರ್ಗದವರಿಗೆ ಆರ್ಥಿಕವಾಗಿ ಬಹಳ ದೊಡ್ಡ ಸಹಾಯವನ್ನು ಸರ್ಕಾರ ಮಾಡಬೇಕು ಮತ್ತು ಅವರ ಮಗನಿಗೆ ಇಲಾಖೆಯಲ್ಲಿ ಒಂದು ನೌಕರಿಯನ್ನು ಕೊಡಬೇಕು ಪೊಲೀಸ್ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಆತನ ಮನೆಗೆ ಭೇಟಿ ಮಾಡಿದ್ದರು ಮತ್ತೆ ನಾನೂ ಕೂಡ ಹೋಗಿದ್ದೆ 18 ನೇ ತಾರೀಖಿನ ದಿವಸ ಅವರ ಶವಸಂಸ್ಕಾರದ ದಿವಸ ಇಡೀ ತಾಲ್ಲೂಕು ಬಂದ್ ಆಚರಿಸಿ, ಅವರಿಗೆ ಸಹಮತಿಯನ್ನು ವ್ಯಕ್ತಪಡಿಸಿತು ಮತ್ತೆ ನಕ್ಸಲರ ವಿರುದ್ಧ ನಾವೆಲ್ಲರೂ ಇದ್ದೇವೆಂಬ ಸಂದೇಶವನ್ನು ನನ್ನ ತಾಲ್ಲೂಕಿನಲ್ಲಿ ಕಳುಹಿಸಿಕೊಡಲಾಗಿದೆ ಆ ಒಂದು ಹೋರಾಟದಲ್ಲಿ ಮಡಿದಂಥ ಪೊಲೀಸ್ ಅಧಿಕಾರಿಯ ಕುಟುಂಬಕ್ಕೆ ಯೋಗ್ಯವಾಗಿರತಕ್ಕದಂಥ ಪರಿಹಾರವನ್ನು ಸರ್ಕಾರ ಕೊಡಿಸಿಕೊಡಬೇಕೆಂದು ನಾನು ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಡಿ ಜಿ ರವರು ಹಾಗೂ ಉನ್ನತಮಟ್ಟದ ಅಧಿಕಾರಿಗಳು ಮತ್ತು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂಥ ಎಡಿಜಿಪಿ ಶಂಕರ್‌ಬಿದರಿಯವರೆಲ್ಲರೂ ಕೂಡ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ ಮತ್ತೆ ಅಲ್ಲಿ ವೆಂಕಟೇಶ್ ರವರು ಗುಂಡೇಟಿನಿಂದ ಮರಣ ಹೊಂದಿರುವ ಹಿನ್ನಲೆಯಲ್ಲಿ Forensic Laboratory ಗೆ ಈ ವಿಚಾರವನ್ನು ಕಳುಹಿಸಿಕೊಟ್ಟಿದ್ದಾರೆ ಇಡೀ ದಿವಸ ಕೂಡ ತಮ್ಮ ಜೊತೆಗೆ ಸಂಪರ್ಕ ಮಾಡಿದ್ದಾರೆ ತಾವೂ ಕೂಡ ಅವರ ಜೊತೆಗೆ ಸಂಪರ್ಕ ಮಾಡಿದ್ದೀರಿ ಮೃತರ ಮನೆಗೆ ಹೋಗಿ ಸಾಂತ್ವನ ಹೇಳುವುದರ ಜೊತೆಗೆ ಅವರ ಕುಟುಂಬ ವರ್ಗದವರಿಗೆ ಉದ್ಯೋಗವನ್ನು ಕೊಡಬೇಕೆಂದು ಹಾಗೂ ಒಳ್ಳೆಯ ಪರಿಹಾರವನ್ನು ಕೊಡಬೇಕೆಂಬುದರ ಬಗ್ಗೆ ಕೂಡ ನಿರ್ಧಾರ ಮಾಡಿದ್ದೇವೆ ಇದರ ಬಗ್ಗೆ ಖಚಿತವಾದಂಥ ಲಿಖಿತ ಹೇಳಿಕೆಯ ಉತ್ತರವನ್ನು ಸೋಮವಾರ ನಾನು ಕೊಡುತ್ತೇನೆ ಏಕೆಂದರೆ, ಇದು ಬಹಳ ಸೂಕ್ಷ್ಮವಾದಂಥ ವಿಚಾರವಾಗಿದೆ

(5) ವಿಷಯ – 1 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಕನ್ನಡ ಪಠ್ಯ ಪುಸ್ತಕದಲ್ಲಿ ರಾಷ್ಟ್ರಗೀತೆಯನ್ನು ಮುದ್ರಿಸದೇ ಇರುವ ಬಗ್ಗೆ

†**ಶ್ರೀ ಎ ಸುನೀಲ್ ಕುಮಾರ್ (ಕಾರ್ಕಳ)** – ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಪಠ್ಯಪುಸ್ತಕಗಳಲ್ಲಿ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಈ ವರ್ಷ ಮುದ್ರಣ ಮಾಡದೇ ಕೈಬಿಡಲಾಗಿದೆ ಸುವರ್ಣ ಕರ್ನಾಟಕದ ವರ್ಷವನ್ನು ಆಚರಿಸುತ್ತಿರುವಂಥ ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಯ, ಮಕ್ಕಳಿಗೆ ಈ ನಾಡಿನ ಮತ್ತು ದೇಶದ ಬಗ್ಗೆ ಹಾಗೂ ಈ ದೇಶದ ಎಲ್ಲಾ ಹೋರಾಟಗಾರರ ಬಗ್ಗೆ ಗೌರವವನ್ನು ಮತ್ತು ಭಕ್ತಿಯನ್ನು ಮೂಡಿಸಬೇಕಾಗಿರತಕ್ಕಂಥ ಗೀತೆಗಳನ್ನು ಸರ್ಕಾರ ಯಾವ ಹಿನ್ನಲೆಯಲ್ಲಿ ಕೈಯಿಟ್ಟಿದೆ ಎನ್ನುವುದು ನಮಗೆ ಅರ್ಥವಾಗಿತ್ತಿಲ್ಲ ಕೆಲವು ವರ್ಷಗಳ ಹಿಂದೆ ನಾಡಗೀತೆಯಲ್ಲಿದ್ದ ಒಂದು ಸಾಲನ್ನು ಬಿಟ್ಟಿದ್ದಕ್ಕೋಸ್ಕರ ನಾಡಿನ ಎಲ್ಲಾ ಜನರೂ ಕೂಡ ಒಂದು ಧ್ವನಿಯಾಗಿ ಹೋರಾಟ ಮಾಡಿದ್ದರ ಪರಿಣಾಮವಾಗಿ ಮತ್ತೆ ಆ ಒಂದು ಸಾಲನ್ನು ಸೇರಿಸಿದಂಥ ಇತಿಹಾಸ ನಮ್ಮ ಕರ್ನಾಟಕದಲ್ಲಿತ್ತು ಆದರೆ, ಈ ವರ್ಷ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಕಸ್ತೂರಿ ಎನ್ನುವಂಥ ಎಲ್ಲಾ ಪಠ್ಯ ಪುಸ್ತಕಗಳಲ್ಲಿಯೂ ಕೂಡ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಬಿಟ್ಟಿರುವಂಥದ್ದು ಅತ್ಯಂತ ವಿಷಾದನೀಯವಾದಂತಹ ಸಂಗತಿ ಆದರೆ, ಇಂಗ್ಲೀಷ್ ಪಠ್ಯಪುಸ್ತಕಗಳಲ್ಲಿ ಆ ಗೀತೆಗಳನ್ನು ಸೇರಿಸಿದ್ದಾರೆ ಆದರೆ, ಕನ್ನಡ ಪಠ್ಯಪುಸ್ತಕಗಳಲ್ಲಿ ಗೀತೆಗಳನ್ನು ಯಾವ ಹಿನ್ನಲೆಯಲ್ಲಿ ಸರ್ಕಾರ ಕೈಬಿಟ್ಟಿದೆ ಎಂಬುದು ಗೊತ್ತಿಲ್ಲ ತಕ್ಷಣ ಸರ್ಕಾರ ಇದರ ಬಗ್ಗೆ ಅರ್ಥ ಮಾಡಿಕೊಂಡು ಆ ಎಲ್ಲಾ ಗೀತೆಗಳನ್ನು ಮತ್ತೊಮ್ಮೆ ಪಠ್ಯಪುಸ್ತಕದಲ್ಲಿ ಸೇರಿಸುವಂಥ ಕ್ರಮವನ್ನು

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ